ಅಸಲು ದಾವಾ ನಂಃ 12/2025
ಡಿ ಡಬ್ಲ್ಯುಃ2

<u>ದಿನಾಂಕಃ **02-07-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ಹೆಚ್.ಕೆ. ವಕೀಲರಿಂದಃ</u>

ನಮ್ಮ ಮನೆಯಿಂದ ವಾದಿ ಮತ್ತು 1 ನೇ ಪ್ರತಿವಾದಿಯವರ ಮನೆ ಅರ್ಧ-ಮುಕ್ಕಾಲು ಕೀ.ಮೀ. ದೂರದಲ್ಲಿ ಇರುತ್ತದೆ. ವಾದಿಯ ತಂದೆ ಶ್ರೀನಿವಾಸ್ ಗೌಡ ಇವರ ಪರಿಚಯ ನನಗೆ ಇರುತ್ತದೆ. ಶ್ರೀನಿವಾಸ್ ಗೌಡರವರು ಬದುಕಿದ್ದಾಗ ಅವರ ಮನೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಶ್ರೀನಿವಾಸ್ ಗೌಡರು ಬದುಕಿದ್ದ ಕಾಲಕ್ಕೆ ಜನ, ಜಾನುವಾರು, ಕೃಷಿ ಸಲಕರಣೆಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಶ್ರೀನಿವಾಸ್ ಗೌಡ, ಅವರ ಹೆಂಡತಿ, ಮಗ ಮತ್ತು ಮಗಳು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ.

2. ಹಿಂದೂ ಅವಿಭಕ್ತ ಕುಟುಂಬ ಏನು ಎಂಬ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿಯನ್ನು ಮದುವೆ ಮಾಡಿಕೊಟ್ಟ ಕಾರಣ ಅವರು ಹಿಂದೂ ಅವಿಭಕ್ತ ಕುಟುಂಬಕ್ಕೆ ಸೇರಿರುವುದಿಲ್ಲ. ವಾದಿ, 1 ಮತ್ತು 2 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವಾಸ ಇರುವುದು ಅವರ ಮದುವೆಯಾಗಿ ಬೇರೆ ಇರುವ ಕಾರಣ ಹೇಳಿರುತ್ತೇನೆ. ಸಂತೋಷ್ ಇವರ ಜೀವಿತಾವಧಿಯಲ್ಲಿ ಯಾವ ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಆ ರೀತಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಜಮೀನು ಮಾರಾಟ ಮಾಡಿ ಬಂದ ಹಣದಲ್ಲಿ ಯಾರು ಯಾರಿಗೆ ಎಷ್ಟು ಹಿಸ್ಸೆ ಕೊಟ್ಟಿರುತ್ತಾರೆಂದು ನನ್ನ ಪ್ರಮಾಣ ಪತ್ರದಲ್ಲಿ ನಾನು ಹೇಳಿರುವುದಿಲ್ಲ.

3. ಸಂತೋಷ್ ರವರಿಗೆ ಬರೆದುಕೊಟ್ಟ ಜಿ.ಪಿ.ಎ. ನನ್ನ ಬಳಿ ಇರುತ್ತದೆ ಸಾಕ್ಷಿ ಮುಂದುವರೆದು ಜಿ.ಪಿ.ಎ. ಇಟ್ಟು ಸಾಲ ಪಡೆದಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಸದರಿ ಜಿ.ಪಿ.ಎ. ಯಾವ ಪೈನಾನ್ಸ್ ನಲ್ಲಿ ಕೊಟ್ಟಿರುತ್ತೇನೆ ಎಂದು ನನಗೆ ಈಗ ಗೊತ್ತಿರುವುದಿಲ್ಲ. ಸಂತೋಷ್ ರವರು ಮರಣ ಹೊಂದಿದ ನಂತರ ಅವರ ಸಂಬಂಧಿಕರು ಮತ್ತು ವಾರಸುದಾರರಿಂದ ನಾನು ಜಿ.ಪಿ.ಎ. ಮಾಡಿಸಿಕೊಂಡಿರುವುದಿಲ್ಲ. ನಾನು ಸ.ನಂ.174 ಮತ್ತು 175 ಜಮೀನಿನ ಕೆಲಸ ಮಾಡಿಸುತ್ತಿದ್ದು ಉಳಿದ ಆಸ್ತಿಯ ಯಾವುದೇ

ಅಸಲು ದಾವಾ ನಂಃ 12/2025
ಡಿ ಡಬ್ಲ್ಯುಃ2

ಉಸ್ತುವಾರಿಯನ್ನು ನಾನು ಮಾಡುತ್ತಿಲ್ಲ. ವಾದಿಯ ತಂದೆ ಜೀವಿತಾವಧಿಯಲ್ಲಿ ಅವರು ಈ ಆಸ್ತಿಗಳು ನಮಗೆ ಮಾತ್ರ ಸಂಬಂಧಿಸಿದ್ದು ಯಾರಿಗೂ ಹಕ್ಕು ಇರುವುದಿಲ್ಲ ಎಂದು ಹೇಳಿದ್ದು, ಆ ಆಧಾರದ ಮೇಲೆ ವಾದಿಗೆ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದು ಹೇಳುತ್ತಿದ್ದೇನೆ. ವಾದಿಯು ತಮ್ಮ ತಂದೆಯ ಕಡೆಯಿಂದ ಆಸ್ತಿಯ ಪಾಲಿನ ಬದಲಾಗಿ ಎಷ್ಟು ಹಣ ಪಡೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ, ಆದರೆ ಸಂತೋಷ ಹೇಳಿದ್ದ ಎಂದು ಉತ್ತರಿಸಿರುತ್ತಾರೆ. ನಾನು ಈಗ ಪಂಚಾಯಿತಿ ಸದಸ್ಯನು ಇರುತ್ತೇನೆ ಎಂದರೆ ಸರಿ. ನಾನು ಬಿ. ಕಣಬೂರು ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷ ಆಗಿದ್ದೆ ಎಂದರೆ ಸರಿ. ನಾನು ದಾವರಾ ಆಸ್ತಿಗಳಲ್ಲಿ ಸಂತೋಷ್ ತೀರಿಕೊಂಡ ನಂತರ 1 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಮಾಡಲು ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ.ನಂ.174 ಮತ್ತು 175 ರಲ್ಲಿ 1 ಎಕ್ರೆ ಆಸ್ತಿಯನ್ನು ಕೊಳ್ಳುವ ಸಲುವಾಗಿ ಪ್ರತಿವಾದಿ 1 ಮತ್ತು 2 ರವರ ಜೊತೆ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯರು ಸೇರಿಕೊಂಡು ವಾದಿಗೆ ದಾವಾ ಆಸ್ತಿಯ ಬಳಿ ಹೋಗದಂತೆ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.ಸಂತೋಷ ಜೀವಿತಾವಧಿಯಲ್ಲಿ ನನಗೆ ಯಾವುದೇ ಜಿ.ಪಿ.ಎ. ಅನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ  ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ